ಕಥೆ

# ಪ್ರಿನ್ಸ್



**ಕೇಶವರೆಡ್ಡಿ ಹಂದ್ರಾಳ**

ಕಲೆ: ವಿಶ್ವನಾಥ್ ಎ.ಎಸ್.

ಹಂಡತಿ ಅಮೆರಿಕದಲ್ಲಿರುವ ಮಗನ ಎಂ.ಎಸ್. ಗ್ರಾಜುಯೇಶನ್ ಈವೆಂಟ್ ಅಟೆಂಡ್ ಮಾಡಲು ಹೋಗಿದ್ದ ಕಾರಣ ಪ್ರಿನ್ಸ್ ಡಿಜಿಪಿ ಪದ್ದಿಂಟಿ ರಂಗರಾವ್ ಮನೆಯ ಮುಂದಿನ ವಿಶಾಲವಾದ ಗಾರ್ಡನ್‌ನಲ್ಲಿ ಕುಳಿತು ವಿಸ್ಕಿಯನ್ನು ಕುಡಿಯುತ್ತಾ ಯಾವುದೋ ಗಹನವಾದ ಆಲೋಚನೆಯಲ್ಲಿ ಮುಳುಗಿದ್ದರು.

ಆರ್ಡರ್ಲಿ ಭೀಮರಾಜು ವಿಸ್ಕಿಯನ್ನು, ಅವರಿಗೆ ಇಷ್ಟವಾದ ಹುರಿದ ಶೇಂಗಾ ಬೀಜವನ್ನು ರೆಡಿ ಮಾಡಿಟ್ಟು ಅವರು ಬೇಕೆಂದಾಗ ಊಟ ಕೊಡಲು ಮನೆಯ ಮುಂಬಾಗಿಲಿನ ತನ್ನ ಮಾಮೂಲಿ ಸೀಟಿನಲ್ಲಿ ಕುಳಿತಿದ್ದ. ಏನಾದರೂ ಅರ್ಜೆಂಟ್ ವಿಷಯಗಳಿದ್ದರೆ ಜೈಲ್ ಸೂಪರಿಂಟೆಂಡೆಂಟ್, ಜೈಲರ್ ಮುಂತಾದ ಅಧಿಕಾರಿಗಳು ಎಷ್ಟೊತ್ತಿನಲ್ಲಾದರೂ ಬಂದು ರಂಗರಾವ್ ಅವರನ್ನು ಭೇಟಿ ಮಾಡಬಹುದಿತ್ತು. ಅಂಥ ಸಮಯದಲ್ಲಿ ಮೊದಲು ರಂಗರಾವ್‌ಗೆ ವಿಷಯ ಮುಟ್ಟಿಸಲು ಹೋಗುತ್ತಿದ್ದಿದ್ದು ಭೀಮರಾಜುವೇ. ಅವರು ಎಡಿಜಿಪಿ ಆಗಿ ಹುದ್ದೆಯನ್ನು ಅಲಂಕರಿಸಿ ಎರಡು ವರ್ಷಗಳ ನಂತರ ಡಿಜಿಪಿ ಆಗಿ ಪದೋನ್ನತಿ ಪಡೆದು ಒಂದು ವರ್ಷವಾಗಿದೆ. ರಂಗರಾವ್ ಈ ಜೈಲನ್ನು ಪ್ರವೇಶಿಸಿದ ದಿನದಿಂದ ಹಿಡಿದು ಇಂದಿನವರೆಗೂ ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ರಂಗರಾವ್ ಅವರ ಬೇಕು-ಬೇಡಗಳನ್ನು ನೋಡಿಕೊಳ್ಳುತ್ತಿರುವುದು ಭೀಮರಾಜುವೇ. ಹಾಗಾಗಿ ತಿಂಡಿ, ಊಟಗಳನ್ನು ಸಮಯಕ್ಕೆ ಸರಿಯಾಗಿ ಮಾಡಬೇಕೆಂದು ಭೀಮರಾಜು ಹಕ್ಕೊತ್ತಾಯ ಮಾಡುತ್ತಿದ್ದ. ಕುಟುಂಬದವರು ಇರಲಿ, ಇಲ್ಲದಿರಲಿ ತಾವು ಮಾತ್ರ ಈ ಮೂರು ವರ್ಷಗಳಿಂದ ಜೈಲಿನ ಕೈದಿಗಳಿಗೆ ಮಾಡಿದ ಊಟವನ್ನೇ ಮೂರೊತ್ತೂ ಮಾಡುತ್ತಿದ್ದರು ರಂಗರಾವ್. ಹಾಗಾಗಿ ಕೆಳಗಿನ ಅಧಿಕಾರಿಗಳು ಯಾವೊತ್ತೂ ಜೈಲಿನ ಕೈದಿಗಳಿಗೆ ಊಟ, ತಿಂಡಿ ಇತ್ಯಾದಿಗಳಲ್ಲಿ ಹೆಚ್ಚು ಕಡಿಮೆ ಮಾಡಲು ಸಾಧ್ಯವೇ ಆಗುತ್ತಿರಲಿಲ್ಲ.

ಹಾಗೆ ನೋಡಿದರೆ ಮೂರು ವರ್ಷಗಳ ಹಿಂದೆ ರಂಗರಾವ್ ಜೈಲಿನ ಎಡಿಜಿಪಿ ಆಗಿ ಅಧಿಕಾರ ವಹಿಸಿಕೊಂಡಾಗ ಜೈಲಿನ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಆದರೆ ರಂಗರಾವ್ ಅಧಿಕಾರ ವಹಿಸಿಕೊಂಡ ಎರಡು ವರ್ಷದಲ್ಲೇ ಜೈಲು ಒಂದು ಸುಂದರ ಆಶ್ರಮವಾಗಿ ಪರಿವರ್ತನೆಗೊಂಡಿತ್ತು. ಜೈಲಿನಲ್ಲಿರುವ ಕೈದಿಗಳನ್ನು ಯಾವುದೇ ಕಾರಣಕ್ಕೂ ಅಪರಾಧಿಗಳಂತೆ ಕಾಣದೆ ಕುಟುಂಬದ ಸದಸ್ಯರಂತೆ ಪರಿಭಾವಿಸಬೇಕೆಂದು ಜೈಲಿನ ಎಲ್ಲಾ ಅಧಿಕಾರಿ ಸಿಬ್ಬಂದಿ ವರ್ಗಕ್ಕೂ ಅಣತಿ ನೀಡಿದ್ದರು. ವಿಶಾಲವಾದ ಜೈಲಿನಲ್ಲಿ ಅನೇಕ ಗುಡಿ ಕೈಗಾರಿಕೆಗಳನ್ನು ಪ್ರಾರಂಭಿಸಿದ್ದರು. ಎರಡು ಪೆಟ್ರೋಲ್ ಬಂಕುಗಳನ್ನು ಸ್ಥಾಪಿಸಿದ್ದರು. ಸುಮಾರು ನೂರು ಎಕರೆಯಲ್ಲಿ ಕೃಷಿಯನ್ನು ಆರಂಭಿಸಿದ್ದರು. ಕೈದಿಗಳನ್ನು ಇವುಗಳಲ್ಲಿ ಅವರವರ ಆಸಕ್ತಿಗೆ, ಪ್ರತಿಭೆಗೆ ತಕ್ಕಂತೆ ತೊಡಗುವಂತೆ ಮಾಡಿ ಅದರಿಂದ ಬರುವ ಲಾಭ ಕೈದಿಗಳ ಅಕೌಂಟಿಗೆ